## ಪ್ರಾರ್ಥನೆ

# ಗಂಗಾಷ್ಟಕದಿಂದ



**ಬ್ರಹ್ಮಾಂಡಂ ಖಂಡಯಂತೀ ಹರಶಿರಸಿ ಜಟಾವಲ್ಲಿಮುಲ್ಲಾಸಯಂತೀ**
**ಸ್ವರ್ಲೋಕಾದಾಪತಂತೀ ಕನಕಗಿರಿ ಗುಹಾಗಂಡ ಶೈಲಾತ್ ಸ್ಖಲಂತೀ ।**
**ಕ್ಷೋಣೀಪೃಷ್ಠೇ ಲುಠಂತೀ ದುರಿತಚಯಚಮೂರ್ನಿರ್ಭರಂ ಭರ್ತ್ಸಯಂತೀ**
**ಪಾಥೋಧಿಂ ಪೂರಯಂತೀ ಸುರನಗರ ಸರಿತ್ಪಾವನೀ ನಃ ಪುನಾತು ॥**

ಬ್ರಹ್ಮಾಂಡವನ್ನು ಭೇದಿಸಿ ಹರನ ಜಟೆಯಲ್ಲಿ ಉಲ್ಲಾಸದಿಂದಿರುವ ನೀನು ಲೋಕದ ತಾಪ ಪರಿಹರಿಸುವೆ. ಕನಕ ಗಿರಿ ಗುಹೆಗಳಲ್ಲಿ ರಭಸದಿಂದ ಸಂಚರಿಸುವೆ. ದುರಿತ ಪಾಪ ಸಮೂಹವನ್ನು ನಿರ್ದಾಕ್ಷಿಣ್ಯವಾಗಿ ಪರಿಹರಿಸುವೆ. ದಾರಿಹೋಕರಿಗೆ ದಾಹ ನೀಗುವೆ. ಸುರನಗರದ ಪಾವನ ಗಂಗೆ ನೀನಾಗಿರುವೆ. ॥ ೧ ॥

**ಶೈಲೇಂದ್ರಾದವತಾರಿಣೀ ನಿಜಜಲೇ ಮಜ್ಜಜ್ಜನೋತ್ತಾರಿಣೀ**
**ಪಾರಾವಾರವಿಹಾರಿಣೀ ಭವಭಯಶ್ರೇಣೀಸಮುತ್ಸಾರಿಣೀ ।**
**ಶೇಷಾಂಗೈರನುಕಾರಿಣೀ ಹರಶಿರೋವಲ್ಲೀದಲಾಕಾರಿಣೀ**
**ಕಾಶೀಪ್ರಾಂತವಿಹಾರಿಣೀ ವಿಜಯತೇ ಗಂಗಾ ಮನೋಹಾರಿಣೀ॥**

ಗಿರಿಶೈಲದಿಂದ ಜನಿಸಿದವಳೆ, ನಿನ್ನ ಜಲದಲ್ಲಿ ಸ್ನಾನ ಮಾಡಿದವರನ್ನು ಉದ್ಧರಿಸುವವಳೆ, ಎಲ್ಲೆ ಮೀರದೆ ವಿಹರಿಸುವವಳೆ, ಭವದ ಭಯವನ್ನು ಕಳೆದು ಉದ್ಧರಿಸುವವಳೆ, ಶೇಷಶಯನನ ಅನುಕೂಲಳೆ, ಹರನ ಶಿರದಲ್ಲಿ ಲತೆಯಂತೆ ಇರುವವಳೆ, ಕಾಶಿಯಲ್ಲಿ ವಿಹರಿಸುವವಳೆ, ಮನಸ್ಸಿಗೆ ಹರ್ಷ ನೀಡುವ ಗಂಗೆ, ನಿನಗೆ ಜಯವಾಗಲಿ. ॥ ೨ ॥

**ಭಗವತಿ ತವ ತೀರೇ ನೀರಮಾತ್ರಾಶನೋಽಹಂ**
**ವಿಗತವಿಷಯತೃಷ್ಣಃ ಕೃಷ್ಣಮಾರಾಧಯಾಮಿ ।**
**ಸಕಲಕಲುಷಭಂಗೇ ಸ್ವರ್ಗ ಸೋಪಾನಗಂಗೇ**
**ತರಲತರತರಂಗೇ ದೇವಿ ಗಂಗೇ ಪ್ರಸೀದ ॥**

ಭಗವತಿ, ನಿನ್ನ ತೀರದಲ್ಲಿ ಆಶ್ರಯ ಪಡೆದ ನಾನು ವಿಷಯದ ಹಂಬಲ ಕಳೆದು ಕೃಷ್ಣನನ್ನು ಆರಾಧಿಸುತ್ತೇನೆ. ಸಕಲ ಕಲ್ಮಶಗಳನ್ನು ಹೋಗಲಾಡಿಸುವವಳೆ, ಸ್ವರ್ಗಕ್ಕೆ ಸೋಪಾನಪ್ರಾಯಳೆ, ಅಲೆಗಳಿಂದ ಕೂಡಿದ ಕನ್ಯಾಗಂಗೆಯೆ, ಪ್ರಸನ್ನಳಾಗು. ॥ ೩ ॥

**ಮಾತರ್ಜಾಹ್ನವಿ ಶಂಭುಸಂಗಮಿಲಿತೇ ಮೌಲೌ ನಿಧಾಯಾಂಜಲಿಂ**
**ತ್ವತ್ತೀರೇ ವಪುಷೋಽವಸಾನಸಮಯೇ ನಾರಾಯಣಾಂಘ್ರಿದ್ವಯಮ್ ।**
**ಸಾನಂದಂ ಸ್ಮರತೋ ಭವಿಷ್ಯತಿ ಮಮ ಪ್ರಾಣ ಪ್ರಯಾಣೋತ್ಸವೇ**
**ಭೂಯಾದ್ಭಕ್ತಿರವಿಚ್ಯುತಾ ಹರಿಹರಾದ್ವೈತಾತ್ಮಿಕಾ ಶಾಶ್ವತೀ ॥**

ಶಂಭುವಿನ ಸಂಗದಿಂದ ಮಹಿಮಾನ್ವಿತಳಾದ ತಾಯಿ ಜಾಹ್ನವಿ, ನಾನು ತಲೆಯ ಮೇಲೆ ಕೈಮುಗಿದು ಬೇಡುವೆ. ನನ್ನ ಶರೀರದ ಅಂತ್ಯಕಾಲದಲ್ಲಿ ನಾರಾಯಣನ ಚರಣಾರವಿಂದಗಳನ್ನು ಸ್ಮರಿಸುತ್ತಿರುವ ನನಗೆ ನನ್ನ ಪ್ರಾಣಪ್ರಯಾಣೋತ್ಸವ ಕಾಲದಲ್ಲಿ ಹರಿಹರರಲ್ಲಿ ಅಭಿನ್ನವಾದ, ಅವಿಚ್ಛಿನ್ನವಾದ, ಶಾಶ್ವತವಾದ ಭಕ್ತಿ ಉಂಟಾಗಲಿ. ॥ ೪ ॥

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ

# ವೇದಾಂತ ಸೂಕ್ತಿಗಳು

**ಈ** ಜಗತ್ತು ಬ್ರಹ್ಮಪ್ರತ್ಯಯದ ಪ್ರವಾಹವಾಗಿರುತ್ತದೆ. ಆದ್ದರಿಂದ ಅದು ಎಲ್ಲೆಡೆಯೂ ಬ್ರಹ್ಮವೇ. ಪ್ರಶಾಂತ ಮನಸ್ಸಿನಿಂದ, ಅಧ್ಯಾತ್ಮದೃಷ್ಟಿಯಿಂದ ಎಲ್ಲ ಅವಸ್ಥೆಗಳಲ್ಲೂ ಬ್ರಹ್ಮವನ್ನೇ ನೋಡಬೇಕು. — ಶ್ರೀ ಶಂಕರಾಚಾರ್ಯ

**ಯಾ**ವ ಜೀವನೂ ಹುಟ್ಟುವುದಿಲ್ಲ; ಇವನ ಜನ್ಮಕ್ಕೆ ಕಾರಣವೇ ಇಲ್ಲ. ಎಲ್ಲಿ ಯಾವುದೂ ಹುಟ್ಟುವುದಿಲ್ಲವೋ ಇದೇ ಆ ಉತ್ತಮವಾದ ಸತ್ಯವಾಗಿದೆ. — ಗೌಡಪಾದ

**ಭ**ಗವಂತನನ್ನು ಅರಿಯಲು ನೀನು ಅರಿತದ್ದೆಲ್ಲವನ್ನೂ ಮರೆಯಬೇಕು. ಭಗವಂತನು ಎಲ್ಲ ಆಸೆಗಳ, ಎಲ್ಲ ಅರಿವಿನ ಕೊನೆ. —ನಿಸರ್ಗದತ್ತ ಮಹಾರಾಜ್

**ಕ**ರ್ಮದಿಂದಲ್ಲ, ಸಂತತಿಯಿಂದಲ್ಲ, ಸಂಪತ್ತಿನಿಂದಲ್ಲ; ತ್ಯಾಗದಿಂದಲೇ ಕೆಲವರು ಅಮೃತತ್ವವನ್ನು ಹೊಂದುವರು.

— ಮಹಾನಾರಾಯಣ ಉಪನಿಷತ್

**ಬ್ರ**ಹ್ಮವನ್ನು ತಿಳಿದವನು ಬ್ರಹ್ಮವಾಗುತ್ತಾನೆ. ಬ್ರಹ್ಮವು ಸತ್ಯ , ಜ್ಞಾನ, ಅನಂತ. ಯಾರು ಹೃದಯಾಕಾಶದಲ್ಲಿರುವ ಗುಹೆಯಲ್ಲಿ ಬ್ರಹ್ಮವನ್ನು ಅರಿಯುವನೋ ಅವನು ಎಲ್ಲ ಕಾಮನೆಗಳನ್ನೂ ಒಂದೇ ಬಾರಿ ಹೊಂದುವನು.

— ತೈತ್ತಿರೀಯೋಪನಿಷತ್ತು

**ಅ**ನಾಸಕ್ತನಾಗಿ ಸತತವೂ ಕರ್ಮವನ್ನು ಮಾಡು. ಇದರಿಂದ ಪರಮಾತ್ಮನನ್ನು ಸೇರುವೆ. — ಭಗವದ್ಗೀತೆ